<u>ಪ್ರಧಾನ ಜಿಲ್ಲಾ ಮತ್ತು ಎಂ.ಎ.ಸಿ.ಟಿ., ನ್ಯಾಯಾಲಯ, ಮಡಿಕೇರಿ-ಕೊಡಗು</u>

ಎಂವಿಸಿ ಸಂಖ್ಯೆ: **44/2023**

**PW-1**

ಸಾಕ್ಷಿಯನ್ನು ದಿನಾಂಕ **15-03-2024** ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

<u>ಮುಖ್ಯವಿಚಾರಣೆ ಅರ್ಜಿದಾರರ ಪರ ಶ್ರೀ ಎಂ.ಎನ್.ಎಸ್ ವಕೀಲರಿಂದಃ</u>

ನಾನು ನನ್ನ ಮುಖ್ಯವಿಚಾರಣೆಯನ್ನು ಪ್ರಮಾಣ ಪತ್ರಿಕೆ ಮೂಲಕ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ. ಪ್ರಕರಣಕ್ಕೆ ಸಂಬಂದಪಟ್ಟಂತೆ ದಾಖಲಾತಿಗಳನ್ನ ಹಾಜರುಪಡಿಸಿದ್ದೇನೆ ಅವುಗಳನ್ನು ಈ ಕೆಳಕಂಡಂತೆ ಗುರುತಿಸಿದ್ದೇನೆ.

ಪ್ರ.ವ.ವರದಿ ಪ್ರತಿಯನ್ನು ನಿಪಿ-**1** ಎಂದು, ಮಹಜರು ನಿಪಿ-**2** ಎಂದು, ಎಂ.ವಿ ವರದಿ ನಿಪಿ-**3** ಎಂದು, ಗಾಯಪ್ರಮಾಣ ಪತ್ರ ನಿಪಿ-**4** ಎಂದು, ದೋಷಾರೂಪಣೆ ಪಟ್ಟಿ ನಿಪಿ-**5** ಎಂದು, ಸಿ.ಸಿ ಸಂಖ್ಯೆ 41/2023ರ ಆದೇಶದ ಪ್ರತಿ ನಿಪಿ-**6** ಎಂದು ಗುರುತಿಸಲಾಯಿತು. ಮಂಗಳೂರಿನ ತೇಜಸ್ವಿನಿ ಆಸ್ಪತ್ರೆಯಲ್ಲಿ ನಾನು ಚಿಕಿತ್ಸೆ ಪಡೆದಿದ್ದೇನೆ, ಅದಕ್ಕೆ ಸಂಬಂಧಪಟ್ಟಂತೆ ವೈದ್ಯರ ಚೀಟಿ, ಬಿಲ್ಲುಗಳನ್ನ ಮತ್ತು ಚಿಕಿತ್ಸೆ ಪಡೆದ ಬಗ್ಗೆ ದಾಖಲೆಗಳನ್ನ ಹಾಜರುಪಡಿಸಿದ್ದೇನೆ ಅವುಗಳನ್ನ (38 ದಾಖಲೆಗಳು) ಒಟ್ಟಾಗಿ ನಿಪಿ-**7** ಎಂದು ಗುರುತಿಸಲಾಯಿತು. ವೈದ್ಯರ ವೆಚ್ಚ ಡಿಸ್ಚಾರ್ಜ್ ಸಮ್ಮರಿ ಒಳಗೊಂಡಿರುತ್ತದೆ. ಗಾಯಗಳು ಉಂಟಾಗಿದ್ದ ಬಗ್ಗೆ ಪೊಟೋಗಳನ್ನ ಸಿ.ಡಿ ಸಮೇತ ಹಾಜರುಪಡಿಸಿದ್ದೇನೆ. ಅವುಗಳನ್ನ ಒಟ್ಟಾಗಿ ನಿಪಿ-**8** ಎಂದು ಗುರುತಿಸಲಾಯಿತು. ಚಿಕಿತ್ಸೆ ಪಡೆಯುವ ಸಂದರ್ಭದಲ್ಲಿ ಕ್ಯಾಂಟಿನಿಂದ ಊಟ ತೆಗೆದುಕೊಳ್ಳುತ್ತಿದ್ದೆವು, ಆ ಬಗ್ಗೆ ಬಿಲ್ ಹಾಜರುಪಡಿಸಿದ್ದು ಅದನ್ನು ನಿಪಿ-**9** ಎಂದು ಗುರುತಿಸಲಾಯಿತು. ನನ್ನ ಡಿಎಲ್ ಹಾಜರುಪಡಿಸಿರುತ್ತೇನೆ ಮೂಲ ದಾಖಲೆಯನ್ನ ನ್ಯಾಯಾಲಯದಲ್ಲಿ ಪರಿಶೀಲಿಸಿ ಅದರ ಪ್ರತಿಯನ್ನ ನಿಪಿ-**10** ಎಂದು ಗುರುತಿಸಲಾಯಿತು. ಛಾಯಚಿತ್ರದ ಬೈಕ್ ನನ್ನ ಮಗನಿಗೆ ಸಂಬಂಧಿಸಿದ್ದು, ಸದರಿ ಬೈಕ್ ನ ಆರ್ ಸಿ ಪ್ರತಿಯನ್ನ ಹಾಜರುಪಡಿಸಿದ್ದು ಅದನ್ನು ನಿಪಿ-**11** ಎಂದು ಗುರುತಿಸಲಾಯಿತು. ನನಗೆ ತೋಟದ ಜಮೀನು ಇದೆ ಎಂದು ತೋರಿಸಲು ಆರ್ ಟಿ ಸಿ ಗಳನ್ನ ಹಾಜರುಪಡಿಸಿದ್ದೇನೆ. ಅವುಗಳನ್ನ ನಿಪಿ-**12** ಎಂದು ಗುರುತಿಸಲಾಯಿತು.

ಅಜಿತ್ ಕುಮಾರ್ ಎಂಬ ವೈದ್ಯರ ಬಳಿ ನಾನು ದಿನಾಂಕ 10.06.2023 ರಂದು ತಪಾಸಣೆಗೆ ಹೋಗಿರುತ್ತೇನೆ. ಆ ಸಂದರ್ಭದಲ್ಲಿ ಚಿಕಿತ್ಸೆಗಳ ಪಡೆದಿರುವ ಬಗ್ಗೆ ದಾಖಲಾತಿಗಳನ್ನು ನಿಪಿ-**13** ಎಂದು ಗುರುತಿಸಲಾಯಿತು. ನಾನು ಚಿಕಿತ್ಸೆ ಪಡೆಯಲು

ಕಾರಿನಲ್ಲಿ ಹೋಗಿದ್ದೆ, ಆ ಬಗ್ಗೆ ಒಂದು ರಶೀದಿಯನ್ನ ಹಾಜರುಪಡಿಸಿದ್ದೇನೆ ಅದನ್ನು ನಿಪಿ-**14** ಎಂದು ಗುರುತಿಸಲಾಯಿತು.

<u>ಪಾಟೀಸವಾಲು **3** ನೇ ಎದುರುದಾರರ ಪರ ಶ್ರೀ ಕೆ.ಡಿ.ಡಿ. ವಕೀಲರಿಂದಃ</u>

ಕಾಲವಕಾಶ ಕೋರಿದ್ದರಿಂದ ಮುಂದೂಡಿದೆ.

<u>ಪಾಟೀಸವಾಲು-**1** ಮತ್ತು **2** ನೇ ಎದುರುದಾರರ ಪರ ವಕೀಲರಿಂದಃ</u>

( 1 ಮತ್ತು 2 ನೇ ಎದುರುದಾರರು ಏಕಪಕ್ಷಿಯವಾಗಿರುವುದರಿಂದ ಪಾಟೀಸವಾಲು ಇಲ್ಲ ಅಂತ ತೆಗೆದುಕೊಳ್ಳಲಾಯಿತು.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸಾ. ಸ. ಇ. ಎ. ಒ.

ಸಹಿ/-
ಪ್ರಧಾನ ಜಿಲ್ಲಾ ಮತ್ತು ಎಂ.ಎ.ಸಿ.ಟಿ. ನ್ಯಾಯಾಧೀಶರು,
ಮಡಿಕೇರಿ-ಕೊಡಗು.